**International Research Journal of Human Resource and Social Sciences**
**ISSN(O): (2349-4085) ISSN(P): (2394-4218)**
**Impact Factor 5.414 Volume 5, Issue 12, December 2018**
**Website**- www.aarf.asia, **Email** : editoraarf@gmail.com

# ಪಂಪನ ಆದಿಪುರಾಣದಲ್ಲಿ ಕಾವ್ಯಧರ್ಮ

**ಡಾ. ಮಾದಯ್ಯ ಮಾಕನಹಳ್ಳಿ**
ಕನ್ನಡ ಉಪನ್ಯಾಸಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕೆ. ಆರ್. ನಗರ

'ಆದಿಪುರಾಣ'ವು ಪಂಪನ ಆದಿಕೃತಿ. ಸು. 40 ರ ವಯಸ್ಸಿನಲ್ಲಿಯೇ ಅವರು ಪಡೆದ ವಿದ್ವತ್ ವಿವೇಕಗಳ ಪ್ರತೀಕವಾದ ಕೃತಿ. ಈ ಗ್ರಂಥದ ಪೀಠಿಕಾಭಾಗದಲ್ಲಿ ತನ್ನ ಆಕರಗಳನ್ನು ಹೇಳಿದ್ದಾನೆ. ಅದರಲ್ಲಿ ಮುಖ್ಯವಾದುದು ಜಿನಸೇನಾಚಾರ್ಯನ ಸಂಸ್ಕೃತ 'ಪೂರ್ವಪುರಾಣ', ಅಲ್ಲಿಯ ಮೊದಲನೆಯ ತೀರ್ಥಂಕರನ ವಿಸ್ತಾರವಾದ ಚರಿತ್ರೆ ಇಲ್ಲಿಯ ವಿಷಯವಾಗಿದೆ. ಮತನಿಷ್ಠೆಯಿಂದ ತನ್ನ ಕೈಗಳನ್ನು ತಾನೇ ಕಟ್ಟಿಕೊಂಡು ಪಂಪನು ಆಕರವನ್ನು ಯಥಾವತ್ತಾಗಿ ಅನುಕರಿಸಿದ್ದಾನೆ. ಕಥಾವಸ್ತು, ಕಥನಕ್ರಮ, ಭಾವಸಂಪತ್ತಿ, ಮತೀಯ ತತ್ತ್ವಬೋಧೆ ಈ ಎಲ್ಲದರಲ್ಲಿಯೂ 'ಆದಿಪುರಾಣ'ವು ಪೂರ್ವಪುರಾಣಕ್ಕೆ ಋಣಿಯಾಗಿದೆ. ಇಷ್ಟು ಪರತಂತ್ರವಾದರೂ ಗ್ರಂಥನ ಕೌಶಲ್ಯದಿಂದ ಒಟ್ಟಿನಲ್ಲಿ ಅದು ಸ್ವತಂತ್ರ ಕಳೆಯನ್ನು ಪಡೆದಿರುತ್ತದೆ. ಎರಡೂ ಜೈನಪುರಾಣಗಳು, ಎರಡರಲ್ಲಿಯೂ ಕಾವ್ಯ ಸತ್ತ್ವವಿದೆ. ಆದರೆ 'ಪೂರ್ವಪುರಾಣ'ದಲ್ಲಿ ಕಾವ್ಯಕ್ಕಿಂತ ಪುರಾಣದೃಷ್ಟಿ ಹೆಚ್ಚಾಗಿದೆ; 'ಆದಿಪುರಾಣ'ದಲ್ಲಿ ಪುರಾಣಕ್ಕಿಂತ ಕಾವ್ಯದೃಷ್ಟಿ ಹೆಚ್ಚಾಗಿ ಫಲಿಸಿದೆ. ಒಂದು ಸರಳವಾದ ಪದ್ಯಕಾವ್ಯ, ಇನ್ನೊಂದು ಪ್ರೌಢವಾದ ಚಂಪೂ ಕಾವ್ಯ. ಒಂದರಲ್ಲಿಯ ಅತಿವಿಸ್ತಾರ ಇನ್ನೊಂದರಲ್ಲಿ ಮಾಯವಾಗಿದೆ. ಸಂಗ್ರಹದೃಷ್ಟಿ ಬಹುಮಟ್ಟಿಗೆ ಕಂಡುಬಂದಿದೆ. 'ಆದಿಪುರಾಣ'ದಲ್ಲಿ ಅನೇಕ ಭವ ಇಲ್ಲವೆ ಜನ್ಮಗಳ ಮೂಸೆಯಲ್ಲಿ ಅನುಭವ ಕುದಿಗೊಂಡು ಭೋಗದಿಂದ ತ್ಯಾಗಕ್ಕೆ ತೆರಳಿ, ಕೊನೆಯ ಜನ್ಮದಲ್ಲಿ ವೈರಾಗ್ಯ ಪರಿಣತಿಯಿಂದ ತಪೋನಿರತನಾಗಿ ಮುಕ್ತಿಯನ್ನೂ ಕೇವಲ ಜ್ಞಾನವನ್ನೂ ಪಡೆದು ಮೊದಲನೆಯ ತೀರ್ಥಂಕರ ಆದಿದೇವನಾದ ಮನುಜನ ಜನ್ಮಯಾತ್ರೆಯ, ಪರಮಸಿದ್ಧಿಯ ಕಥೆಯಿದೆ. ಇದರ ಭವ್ಯತೆಯನ್ನೂ ಸಮ್ಯಕ್ತ್ವವನ್ನೂ ಅರಿತು ಆತ್ಮೀಕರಿಸಿಕೊಂಡು ಕಾಲತ್ರಯವನ್ನು ನಿಲುಕುವ ಕಲ್ಪನೆಯ ಕುಂಚದಿಂದ ಪಂಪನು ಇದನ್ನು ಚಿತ್ರಿಸಿದ್ದಾನೆ. ಇಲ್ಲಿಯೇ ಅವನ ಗುಣ ವಿಶೇಷವಿದೆ.

**© Association of Academic Researchers and Faculties (AARF)**
A Monthly Double-Blind Peer Reviewed Refereed Open Access International e-Journal - Included in the International Serial Directories.

‘ನೆಗೞ್ದಾದಿಪುರಾಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ’ ಎಂದು ಪಂಪನು ಮಾಡಿದ ಘೋಷಣೆ ಬಹುಮಟ್ಟಿಗೆ ಸಾರ್ಥಕವಾಗಿದೆ. ಸನ್ನಿವೇಶ ರಚನೆ, ಪಾತ್ರ ನಿರೂಪಣೆ, ಮತ ವಿವರಣೆಗಳಲ್ಲಿ ಕಾವ್ಯಧರ್ಮ ಮತ್ತು ಧರ್ಮಗಳ ಸಮನ್ವಯವನ್ನು ಸಾಧಿಸಲಾಗಿದೆ. ಆದರೂ ಹದಿನಾರಾಣೆಯ ಯಶಸ್ಸು ದೊರೆತಿಲ್ಲ. ಪ್ರೌಢಕಾವ್ಯ ರಚನೆಯ ಪ್ರಥಮಾವೇಶದಲ್ಲಿ ಸಂಸ್ಕೃತ ಪಾಂಡಿತ್ಯದ ಪ್ರದರ್ಶನ, ನೀರಸವಾದ ವಿವರಣೆಗಳು ತಲೆದೋರಿವೆ. ಇದಕ್ಕೆ ಮಹಾಬಲ ರಾಜನ ಓಲಗದಲ್ಲಿ ನಡೆದ ತಾತ್ವಿಕ ವಿವಾದವೂ ಒಂದು ಒಳ್ಳೆಯ ನಿದರ್ಶನ. ಮೂಲದಲ್ಲಿಯ ಈ ಭಾಗವನ್ನು ಸಂಗ್ರಹಿಸುವಲ್ಲಿ ಕವಿಯ ರಸದೃಷ್ಟಿ ಫಲಿಸದಂತೆ ವಿದ್ವತ್ತೆಯೂ ಮೆರೆದಿದೆ. ಚಾರ್ವಾಕ ದರ್ಶನದ ಸಾರವು “ಬಾೞ್ವೆನಮಿಂದ್ರಿಯವರ್ಗದಿಚ್ಛೆಯಂ ಸಲಿಸಿ ಬಸಂತದೊಳ್ ಕಳಚಿಗರ್ಚಿದ ಕೋಗಿಲೆಯಂತೆ ಬಿಚ್ಚತಂ ನಲಿವುದು” ಎಂಬಲ್ಲಿ ಸೊಗಸಾಗಿ ಬಂದಿದೆ. ಆದರೆ ಮುಂದಿನ ವಚನದಲ್ಲಿ ಬಂದಿರುವ ವಿಜ್ಞಾನವಾದ – ನಿರೂಪಣೆ ಅತಿವಿದ್ವತ್ತೆಯಿಂದ ಕೂಡಿದೆ. ಒಂದೊಂದು ತನ್ನ ಹಿಂದಿನ ಭವಗಳಲ್ಲಿ ಭೋಗದ ತರತಮ ಸೋಪಾನಗಳನ್ನೇರುತ್ತ ಪ್ರೇಮದರ್ಶನದಲ್ಲಿ ಮುಂದುವರಿಯುತ್ತ ನಡೆದಿರುವ ಪುರುದೇವನ ಚರಿತ್ರೆಯಲ್ಲಿ ಅಲ್ಲಲ್ಲಿ ಚೆಲುವಾದ ರಸಸ್ಥಾನಗಳಿರುತ್ತವೆ. ಎಲ್ಲಕ್ಕಿಂತ ಹೆಚ್ಚು ರಮ್ಯವಾದುದು ಕೊನೆಯ ಜನ್ಮದಲ್ಲಿ ಸುಖದ ತುತ್ತತುದಿಯಲ್ಲಿರುವಾಗ ಅವನು ವೈರಾಗ್ಯ ಹೊಂದಿದ ಸನ್ನಿವೇಶ. ಅದೇ ನೀಲಾಂಜನೆಯ ನೃತ್ಯ ಸಂದರ್ಭ. ಇಲ್ಲಿ ಕಾವ್ಯಧರ್ಮ ಮತ್ತು ಧರ್ಮಗಳು ಪಡೆದ ಸಮನ್ವಯವು ಸಂಪೂರ್ಣವಾಗಿದೆ. ಆ ಅಮರನರ್ತಕಿಯ ರೂಪು ಬೆಡಗುಗಳ ಮತ್ತು ಕುಣಿತದ ವರ್ತನೆಯಲ್ಲಿ ಪಂಪನ ಕಲ್ಪನಾಶಕ್ತಿ ಕಾರಂಜಿಯಂತೆ ಪದ್ಯ ಪದ್ಯದಲ್ಲಿ ಪುಟಿದಿದೆ. ಭೋಗದ ಅತಿಶಯವು ವೈರಾಗ್ಯದ ಅತಿಶಯಕ್ಕೆ ಕಾರಣವಾಯಿತು ಎಂಬುದನ್ನು ಈ ಸನ್ನಿವೇಶ ಸೂಚಿಸುತ್ತದೆ.

**ಕೋಟಿತೆಱದಿಂದಮೆಸೆವೀ**

**ನಾಟಕಮಂ ತೋಱಿ ಮಾಣ್ದಳಿಲ್ಲನ್ ಬಗೆಯೊಳ್ ।**

**ನಾಟುವಿನಮರಿ ಸಂಸ್ಕೃತಿ**

**ನಾಟಕಮುಮನೆನಗೆ ನೆಱೆಯೆ ತೋಱಿದಳೀಗಳ್ ॥ (9–45)**

ಈ ಭಾಗವು ಅರ್ಥಪೂರ್ಣವಾಗಿದೆ. ‘ಪೂರ್ವಪುರಾಣ’ದಲ್ಲಿಯ ಈ ಸಂದರ್ಭವನ್ನು ‘ಆದಿಪುರಾಣ’ದ ರಸಸೃಷ್ಟಿಯೊಡನೆ ಹೋಲಿಸಿ ನೋಡಿದರೆ ಪಂಪನ ಅಪೂರ್ವ ಪ್ರತಿಭೆಯನ್ನು ಮನಗಾಣಬಹುದು. ಒಂದರಲ್ಲಿ ಪ್ರಾಚೀನ ಪುರಾಣದ ಸಾಂಪ್ರದಾಯಿಕ ಬೋಧನೆಯಿದ್ದರೆ ಇನ್ನೊಂದರಲ್ಲಿ ಮಾರ್ಗಕಾವ್ಯದ ರಸಪೂರ್ತಿಯಿದೆ. ‘ಆದಿಪುರಾಣ’ದ ಕಥಾವಸ್ತುವಿಗೆ ಅನುಗುಣವಾಗಿ ಪಾತ್ರ ರಚನೆ ವ್ಯಾಪಕವಾಗಿದೆ. ಆದಿನಾಥನ ವಿಷಯದಲ್ಲಿ ಅದು ರೂಢವಾದ ಅರ್ಥದಲ್ಲಿ ಪಾತ್ರರಚನೆಯೇ ಅಲ್ಲವೆನ್ನಬಹುದು. ಜನ್ಮದಿಂದ ಜನ್ಮಕ್ಕೆ ಬೆಳೆಯುತ್ತ ಬಂದ ಜೀವನದ ಜನ್ಮಯಾತ್ರೆಯದು, ಮಾನವನು

© Association of Academic Researchers and Faculties (AARF)

ಆತ್ಮವಿಕಾಸದಿಂದ ದೇವನಾದ ಕಥೆಯದು. ಈ ಆದರ್ಶಸಿದ್ಧಿ ಗೃಹೀತವಾದದ್ದಾದರೂ ಸಾಂಪ್ರದಾಯಿಕ ರೀತಿಯಲ್ಲಿಯೂ ಸಾಂಕೇತಿಕವಾದ, ಸಾರ್ವತ್ರಿಕವಾದ ಒಂದು ಬಗೆಯ ಶ್ರಮವಿದೆ, ಸಾಧನೆಯಿದೆ, ವಿಕಾಸವಿದೆ. ಒಂದೊಂದು ಜನ್ಮದ ಚರಿತ್ರೆಯನ್ನು ಮಾತ್ರ ನೋಡಿದರೆ ಸಹ ಲಲಿತಾಂಗ – ಸ್ವಯಂಪ್ರಭೆಯರ ಅತೃಪ್ತಭೋಗ, ಪ್ರಣಯ ವಿರಹಗಳು, ವಜ್ರಜಂಘ–ಶ್ರೀಮತಿಯವರ ಭೋಗತೃಪ್ತಿ, ಸಹಮರಣಗಳು ಉತ್ಕಟ ರಸಚಿತ್ರಗಳಾಗಿ ಬಂದಿವೆ. ಇಲ್ಲಿಯ ಮಾನವತೆ ಬರಲಿರುವ ಆದಿನಾಥನ ದಿವ್ಯತೆಗೆ, ಸಮ್ಯಕ್ತ್ವಸಿದ್ಧಿಗೆ ಸುಂದರವಾದ ಹಿನ್ನೆಲೆಯನ್ನು ಒದಗಿಸಿರುತ್ತದೆ. ಜೈನಶಾಸ್ತ್ರ ಪುರಾಣ, ಸಂಪ್ರದಾಯ ಇವುಗಳ ಜಾಲದಲ್ಲಿ ಸಿಕ್ಕಿದ್ದರೂ ಪಂಪನು ಅವುಗಳಿಗೆ ಒಟ್ಟಿನಲ್ಲ ಪರಾಧೀನನಾಗದೆ ಕಲಾವಿದನ ರೀತಿಯಲ್ಲಿ ಅವನ್ನು ಬಳಸಿಕೊಂಡಿದ್ದಾನೆ. ತೀರ್ಥಂಕರನಾಗತಕ್ಕ ಪುರದೇವನ ಪಂಚ ಕಲ್ಯಾಣ ಇಲ್ಲವೆ ಜೀವನದ ಐದು ಘಟ್ಟಗಳನ್ನು ಅವನು ನಿರೂಪಿಸಿದ್ದರಲ್ಲಿ ಶುಷ್ಕಶಾಸ್ತ್ರವಿಲ್ಲ, ಶಾಸ್ತ್ರವನ್ನು ಒಳಗೊಂಡು ಅವನ್ನು ಮೀರಿದ ಕಲಾಮಹಿಮೆಯಿದೆ. ಪರಿನಿಷ್ಕ್ರಮಣ ಕಲ್ಯಾಣ ಸಂದರ್ಭವು ಇದಕ್ಕೆ ಉತ್ತಮ ನಿದರ್ಶನ.

'ಆದಿಪುರಾಣ'ದ ಇತರ ಪಾತ್ರಗಳಲ್ಲಿ ಆದಿನಾಥನ ಮಕ್ಕಳಾದ ಭರತಚಕ್ರವರ್ತಿ ಮತ್ತು ಬಾಹುಬಲಿ ಇವರನ್ನು ನೆನೆಯುವುದು ಅವಶ್ಯ. ಈ ಕಾವ್ಯದ ಉತ್ತರಭಾಗದ ಒಂದು ಆಶ್ವಾಸದಲ್ಲಿ ಮಾತ್ರ ಈ ಚಿತ್ರಣವು ಬಂದಿದ್ದರೂ ಅದರ ಮಹತ್ವ ಹೆಚ್ಚಿನದಾಗಿದೆ. ಆಧ್ಯಾತ್ಮಿಕ ಸಿದ್ಧಿ ಸಾಧನೆಗಳ ಒಂದು ಮುಖವು ಆದಿನಾಥನ ಚರಿತ್ರೆಯಲ್ಲಿ ತೋರಿದ್ದರೆ ಇನ್ನೊಂದು ಮುಖವು ಅವನ ಮಕ್ಕಳಾದ ಭರತ ಬಾಹುಬಲಿಗಳ ಚರಿತ್ರೆಯಲ್ಲಿ ತೋರಿ ಕಥೆಗೆ ಸಮಗ್ರತೆಗೆ ಉಂಟಾಗಿದೆ. ''ಆದಿನಾಥನ ಜನ್ಮಾವಳಿಯ ಕಥೆಗಳಲ್ಲಿ ಭೋಗದ ನಿರಾಸವನ್ನು ನೋಡಿದೆವು; ಇನ್ನು ವಿಭವದ ನಿಷ್ಫಲತೆಯನ್ನು ಅವನ ಹಿರಿಯ ಮಗನೂ ಪ್ರಥಮ ಚಕ್ರವರ್ತಿಯೂ ಆದ ಭರತನ ವೃತ್ತಾಂತದಲ್ಲಿ ನೋಡಬೇಕಿದೆ''. ತುಸು ಬೇರೆಯಾಗಿ ಹೇಳುವುದಾದರೆ, ಆದಿನಾಥನ ಕಥೆಯಲ್ಲಿ ಕಾಮತ್ಯಾಗ, ಭರತನ ಕಥೆಯಲ್ಲಿ ಅಹಂಕಾರ ತ್ಯಾಗ ಇವು ಸಮ್ಯಕ್ತ್ವಸಿದ್ಧಿಗೆ ಪೂರ್ವಭಾವಿಗಳೆಂದು ತೋರಿಸಲಾಗಿದೆ. ದಿಗ್ವಿಜಯಕ್ಕೆ ಹೊರಟ ಭರತಚಕ್ರಿ ಹೋದ ಹೋದಲ್ಲಿ ಗೆಲುವು ಹೊಂದಿ ಉಬ್ಬಿ ಹೋಗುತ್ತಾನೆ. ತನ್ನ ಗೆಲುವಿನ ಶಾಸನವನ್ನು ವೃಷಭಾಚಲದಲ್ಲಿ ಬರೆಯಿಸಬೇಕೆನ್ನಲು ಅಲ್ಲಿ ತನ್ನ ಹಿಂದಿನ ಅನೇಕ ಚಕ್ರಿಗಳು ಬರೆಸಿದ ಆತ್ಮಪ್ರಶಂಸೆಯನ್ನು ನೋಡಿದನು. ''ಅಂತವನೊಯ್ಯನೆ ನೋಡಿ ನೋಡಿ ಸೋರ್ದುದು ಕೊಳಗೊಂಡ ಗರ್ವರಸಂ''. ಅದು ಅವನ ಅಹಂಕಾರಕ್ಕೆ ಮೊದಲನೆಯ ಆಘಾತ. ಆಮೇಲೆ ಊರಿಗೆ ಮರಳಿ ಬಂದಾಗ ರಾಜಧಾನಿಯ ಬಾಗಿಲಲ್ಲಿ ಅವನ ಚಕ್ರರತ್ನವು ನಿಂತು ಅವನ ತಮ್ಮಂದಿರೇ ಅವನು ಅಧಿರಾಜನೆಂದು ಒಪ್ಪಿಕೊಳ್ಳುವುದಿಲ್ಲವೆಂದು ಸೂಚಿಸಿತು. ''ಅಣ್ಣ ಹಿರಿಯನೆಂದು ಮನ್ನಿಸಬಹುದು, ಅವನಿಗೆ ಆಳೆಂದು ಯಾಕಿರುವುದು'' ಎಂದು ನೂರು ಜನ ತಮ್ಮಂದಿರು ವಿರಕ್ತಿಯಿಂದ ತಂದೆಯ ಬಳಿಗೆ ತಪಸ್ಸಿಗೆ ಹೋದರು. ಬಾಹುಬಲಿ ಮಣಿಯಲಿಲ್ಲ. ಅಣ್ಣನೆಂದು ಗೌರವಿಸಬಹುದು, ಆದರೆ ತನಗಿಂತ ಶೂರನೆಂದಲ್ಲ ಎಂಬುದು ಅವನ ವಾದ.

**ಪಿರಿಯಣ್ಣಂಗೆಱಗುವುದೇಂ**

**ಪರಿಭವವೇ, ಕೀಱಿ ನೆತ್ತಿಯೊಳ್ ಬಾಳಂ ನಿ – ।**

**ರ್ನೆರ ಮೂಱಿ ಚಲದಿನೆಱಗಿಸ –**

**ಲಿರೆ ಭರತಂಗೆಱಗುವೆಱಕಮಂಜಮೆಯಲ್ತೇ ॥ (ಆ.ಪು. 14–75)**

"ಸಂಗರನಿಕಷದೊಳೆಮ್ಮಂದಮಂ ನೀನೆ ಕಾಣ್ಬೈ" ಎಂದು ಬಾಹುಬಲಿ ಹೇಳಿ ಕಳಿಸುತ್ತಾನೆ. ಕೊನೆಗೆ ದೃಷ್ಟಿಯುದ್ಧದಿಂದ ತೊಟ್ಟು ಮಲ್ಲಯುದ್ಧದವರೆಗೆ ಇಬ್ಬರೂ ಹೋರಾಡಲು ಬಾಹುಬಲಿಯೇ ಗೆಲ್ಲುತ್ತಾನೆ. ವಿಶ್ವವಿಜಯಿಯಾದ ಭರತನ ಅಹಂಕಾರಕ್ಕೆ ಇದು ವಜ್ರಾಘಾತ. ಆದರೆ ಸೋಜಿಗವೆಂದರೆ ತನ್ನ ಗೆಲುವಿನಿಂದ ಉಬ್ಬಿ ಹೋಗದ ಅಣ್ಣನ ರಾಜ್ಯದಾಸಕ್ಕೆ ಮತ್ತು ಅಹಂಕಾರಕ್ಕೆ ತಾನೇ ಹೇಸಿ ಬಾಹುಬಲಿ ವೈರಾಗ್ಯ ತಾಳುತ್ತಾನೆ, ತಪಸ್ಸಿಗೆ ಹೋಗುತ್ತಾನೆ. ಈ ಉದಾತ್ತ ತ್ಯಾಗದ ಪರಿಣಾಮವು ಭರತನ ಮೇಲೆ ತೀವ್ರವಾಗಿ ಆಗುತ್ತದೆ. ಮುಂದೆ ಕೆಲಕಾಲ ಧರ್ಮದಿಂದ ರಾಜ್ಯವನ್ನಾಳಿ ಅವನೂ ಯತಿದೀಕ್ಷೆಯನ್ನು ತಾಳುತ್ತಾನೆ. ಈ ಸನ್ನಿವೇಶದಲ್ಲಿ ಮೂಲವನ್ನು ಅನುಸರಿಸಿ ಪಂಪನು ಮಾಡಿದ ಸ್ವಭಾವ ಚಿತ್ರಣವು ಅವನ ವಿಶಾಲ ಮನದ ಸಂಸ್ಕೃತಿಗೂ ಉನ್ನತ ಪ್ರತಿಭೆಗೂ ಸಾಕ್ಷಿಯಾಗಿರುತ್ತದೆ.

'ಆದಿಪುರಾಣ'ವು ಕನ್ನಡದಲ್ಲಿ ಮೊದಲನೆಯ ಜೈನಪುರಾಣವೋ ಹೇಗೆ ಎಂಬುದನ್ನು ಹೇಳಲಾರೆವು. ಶ್ರೀವಿಜಯನ 'ಚಂದ್ರಪ್ರಭ ಪುರಾಣ' ಯಾವ ಕಾಲದ್ದೆಂಬುದನ್ನು ನಮಗೆ ತಿಳಿದಿಲ್ಲ. ಅದು ಉಪಲಬ್ಧವಾಗಿಲ್ಲ. 1ನೆಯ ಗುಣವರ್ಮನ 'ಹರಿವಂಶ' ಮುಂದಿನ ನೇಮಿನಾಥ ಪುರಾಣಗಳಂತೆ ಇದ್ದಿರಬಹುದು. ಸದ್ಯಕ್ಕೆ 'ಆದಿಪುರಾಣ'ವು ಉಪಲಬ್ಧವಾದ ಮೊದಲನೆಯ ಜೈನ ಪುರಾಣವೆಂದೂ, ತರುವಾಯದ ಪುರಾಣಗಳಿಗೆ ಒಂದು ಹೆದ್ದಾರಿಯನ್ನು ಹಾಕಿಕೊಟ್ಟ ಗ್ರಂಥವೆಂದೂ ಭಾವಿಸಬಹುದು. ಇದರಲ್ಲಿ ಜೈನವೆಂಬ ಸ್ವರೂಪವು ಸ್ಪಷ್ಟವಾಗಿರುವಂತೆ ವಿಶ್ವವ್ಯಾಪಿ ಎಂಬ ಸತ್ವವು ಹುದುಗಿಕೊಂಡಿದೆ. ಪಂಪ ಹೇಳಿದಂತೆ ಕಾವ್ಯಧರ್ಮ–ಧರ್ಮ ಇವುಗಳ ಸಮನ್ವಯವು ಇದರಲ್ಲಿ ಬಹುಶಃ ಸಾಧಿಸಿದೆ.

'ಆದಿಪುರಾಣ'ವು ಹದಿನಾರು ಆಶ್ವಾಸಗಳುಳ್ಳ ಸುದೀರ್ಘವಾದ ಪುರಾಣ ಕಾವ್ಯ. ಮೊದಲಿನ ಆರು ಆಶ್ವಾಸಗಳಲ್ಲಿ ಪುರುದೇವನ ಹಿಂದಿನ ಒಂಬತ್ತು ಜನ್ಮಗಳ ಕತೆಯಿದೆ. ಪಂಪನ 'ಆದಿಪುರಾಣ'ವು ಮೊದಲನೆಯ ತೀರ್ಥಂಕರನಾದ ಪುರುದೇವನ ಚರಿತ್ರೆ. ಇದು ಜೈನರಿಗೆ ಪೂಜ್ಯರಾದ 'ತ್ರಿಷಷ್ಟಿಶಲಾಕಾ ಪುರುಷರಲ್ಲಿ ಒಬ್ಬನಾದ ಆದಿದೇವನ ದಿವ್ಯ ಚರಿತ್ರೆಯನ್ನು ಒಳಗೊಂಡಿದೆ. ತ್ರಿಷಷ್ಟಿಶಲಾಕಾ ಪುರುಷರೆಂದರೆ ಇಪ್ಪತ್ತನಲ್ಕು ಜನ ತೀರ್ಥಂಕರರು, ಹನ್ನೆರಡು ಜನ ಚಕ್ರವರ್ತಿಗಳು, ಒಂಬತ್ತು ಮಂದಿ ಬಲದೇವರು, ಒಂಬತ್ತು ಮಂದಿ ವಾಸುದೇವರು ಹಾಗೂ ಒಂಬತ್ತು ಮಂದಿ ಪ್ರತಿವಾಸುದೇವರು – ಹೀಗೆ ಒಟ್ಟು

© Association of Academic Researchers and Faculties (AARF)
A Monthly Double-Blind Peer Reviewed Refereed Open Access International e-Journal - Included in the International Serial Directories.

ಅರವತ್ತಮೂರು ಮಂದಿ. ಈ ತೀರ್ಥಂಕರರ ಚರಿತ್ರೆಯನ್ನು ಹೇಳುವುದು ಜೈನಪುರಾಣಗಳ ವಸ್ತು. ಸಂಸಾರದಲ್ಲಿ ಸಿಕ್ಕಿಕೊಂಡು ಬವಣೆ ಪಡುತ್ತಿರುವ ಜೀವವು ಸಮ್ಯಕ್ ಜ್ಞಾನ, ಸಮ್ಯಕ್ ದರ್ಶನ, ಸಮ್ಯಕ್ ಚಾರಿತ್ರ್ಯಗಳೆಂಬ ರತ್ನತ್ರಯವನ್ನಾಶ್ರಯಿಸಿ ಈ ಸಂಸಾರವನ್ನು ದಾಟಿ ಮುಕ್ತಿ ಪಡೆಯುವುದು ತೀರ್ಥಂಕರರ ಜೀವನ ಚರಿತ್ರೆಗಳನ್ನು ಹೇಳುವಾಗ ವರ್ಣಿಸುವ ಜೀವನ ವಿಕಾಸಕ್ರಮ. ಈ ಜೀವನ ವಿಕಾಸದ ಕೊನೆಯ ಮೆಟ್ಟಿಲು ತೀರ್ಥಂಕರತ್ವ ; ಅದನ್ನು ದಾಟಿದ ಮೇಲೆ ಶಾಶ್ವತವಾದ ಮೋಕ್ಷ.

ತೀರ್ಥಂಕರನಾಗುವ ಜೀವವು ಹೇಗೆ ಹಿಂದಿನ ಜನ್ಮಗಳಲ್ಲಿ ಕಷ್ಟವನ್ನು ಭವಿಸಿ ಪಾಪವನ್ನು ಕಡಿಮೆ ಮಾಡಿಕೊಂಡಿತೆಂಬುದನ್ನು ನಿರೂಪಿಸುವುದು 'ಭವಾವಳಿ' (ಎಂದರೆ ತೀರ್ಥಂಕರರ ಹಿಂದಿನ ಜನ್ಮಗಳ) ವರ್ಣನೆಯ ಉದ್ದೇಶ. ಪ್ರತಿಯೊಂದು ಜನ್ಮದಲ್ಲೂ ತನ್ನ ಕರ್ಮವನ್ನು ಕಡಿಮೆ ಮಾಡಿಕೊಳ್ಳುತ್ತ ಮೋಕ್ಷಕ್ಕೆ ಹತ್ತಿರವಾದ ಜೀವ ತಳೆದು ಹುಟ್ಟುವುದು ತೀರ್ಥಂಕರನ ಜನ್ಮದಲ್ಲಿ. ತೀರ್ಥಂಕರರ ಜೀವನವು ಪುರಾಣಗಳಲ್ಲಿ ಐದು ಹಂತಗಳಲ್ಲಿ ವರ್ಣಿತವಾಗಿರುತ್ತದೆ. ಅವುಗಳೆಂದರೆ 'ಗರ್ಭಾವತರಣ ಕಲ್ಯಾಣ', ತೀರ್ಥಂಕರ ಶಿಶುವು ತಾಯಿಯ ಗರ್ಭವನ್ನು ಪ್ರವೇಶಿಸುವುದು. 'ಜನ್ಮಾಭಿಷೇಕ ಕಲ್ಯಾಣ' – ಹುಟ್ಟುವುದು, 'ಪರಿನಿಷ್ಕ್ರಮಣ ಕಲ್ಯಾಣ' – ವೈರಾಗ್ಯವುಂಟಾಗುವುದು. 'ಕೇವಲ ಜ್ಞಾನ ಕಲ್ಯಾಣ' ಅತ್ಯಂತ ಶ್ರೇಷ್ಠ ಜ್ಞಾನವುಂಟಾಗುವುದು ಮತ್ತು 'ಪರಿನಿರ್ವಾಣ ಕಲ್ಯಾಣ' ಮೋಕ್ಷಕ್ಕೆ ಸೇರುವುದು. ಧಾರ್ಮಿಕ ಕಾವ್ಯಗಳಲ್ಲಿ ಇಲ್ಲಿ ಕವಿಗೆ ಸ್ವಾತಂತ್ರ್ಯ ಕಡಿಮೆ, ಆದರೆ ಪ್ರತಿಭಾಶಾಲಿಗಳಾದ ಕವಿಗಳು ಈ ಚೌಕಟ್ಟಿನಲ್ಲಿಯೇ ಅಲ್ಲಲ್ಲಿ ಸುಂದರವಾದ ಸನ್ನಿವೇಶಗಳನ್ನು ನಿರ್ಮಿಸುತ್ತಾರೆ ; ಅಂತಹ ಕವಿಗಳಲ್ಲಿ ಪಂಪನು ಶ್ರೇಷ್ಠನೆನಿಸಿಕೊಂಡವನು.

ಇಲ್ಲಿ ಧರ್ಮ ಎಂಬ ಸಾಮಾನ್ಯ ಪದದಲ್ಲಿ ಮತಧರ್ಮ ಮತ್ತು ವಿಶ್ವಧರ್ಮ ಎರಡೂ ಸೇರಿಕೊಂಡಿವೆ. ಶಾಸ್ತ್ರ ಜಡವಾದ ಭಾಗ, ಸಂಸ್ಕೃತ ಶಬ್ದಾಡಂಬರದ ಭಾಗಗಳನ್ನು ಕಡೆಗಣಿಸಿದರೆ ಅದು ಉತ್ತಮ ಕಾವ್ಯವೆಂಬುದು ನಿಜ. ''ಆದಿಪುರಾಣದ ಕೆಲವು ನೀರಸವಾದ ಸಂಗತಿಗಳನ್ನೂ, ವಿವರಗಳನ್ನೂ ಬಿಟ್ಟರೆ ಅದೊಂದು ಉತ್ತಮ ಕಾವ್ಯವಾಗುತ್ತದೆ ಎಂಬ ತೀ.ನಂ.ಶ್ರೀ ಅವರ ಅಭಿಪ್ರಾಯವನ್ನೂ ''ಕಾವ್ಯಕಲಾದೃಷ್ಠಿಯಿಂದ ಪಂಪಭಾರತಕ್ಕೆ ಹೊಯ್‌ಕಯ್ಯಾಗಿ ನಿಲ್ಲಲಾರದು. ಆತನ ಆದಿಪುರಾಣ ಬಹುವಿಷಯಗಳಲ್ಲಿ, ಅನೇಕ ಕಾರಣಗಳಿಂದ. ಆದರೆ ಭವ್ಯತೆಯ ದೃಷ್ಟಿಯಿಂದ ಮಾತ್ರ ಆದಿಪುರಾಣವು ಒಂದೆರೆಡು ಸನ್ನಿವೇಶಗಳಲ್ಲಿ ಭಾರತಕ್ಕೂ ಮಿಗಿಲಾಗಿ ಮಹೋನ್ನತವಾಗಿದೆ'' ಎಂಬುದನ್ನೂ ಗಮನಿಸಬೇಕು. ಪಂಪನ ಕೃತಿಗಳೆಡರನ್ನೂ ಹೋಲಿಸಲಾಗಿ 'ಆದಿಪುರಾಣ'ವು ಕೆಲವಂಶಗಳಲ್ಲಿ ಮಾತ್ರ 'ಉತ್ತರ', 'ಕಾವ್ಯ'; ಬಹುಶಃ ಎಲ್ಲ ಅಂಶಗಳಲ್ಲಿ ಉತ್ತಮ ಕಾವ್ಯವಾದ 'ಪಂಪಭಾರತ'ವು ಮುಂದೆ ಸೃಷ್ಟಿಯಾಯಿತೆಂಬುದನ್ನು ನೆನೆದಿರಬೇಕು.

**ಪರಾಮರ್ಶನ ಗ್ರಂಥಗಳು**

1. ಪಿ.ವಿ. ನಾರಾಯಣ : **ಚಂಪೂ ಕವಿಗಳು ;** ಸಪ್ನ ಬುಕ್ ಹೌಸ್, ಬೆಂಗಳೂರು, 2018.

2. ರಂ.ಶ್ರೀ. ಮುಗಳಿ : **ಕನ್ನಡ ಸಾಹಿತ್ಯ ಚರಿತ್ರೆ ;** ಗೀತಾ ಬುಕ್ ಹೌಸ್ ಪ್ರಕಾಶನ, ಮೈಸೂರು, 2015.

© **Association of Academic Researchers and Faculties (AARF)**